ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ5[7] ಅ.ಆ.ನೇ/10/2015-16 ದಿನಾಂಕ: 23-9-2015

## : ಸುತ್ತೋಲೆ :

1. ಅನುಕಂಪದ ಆಧಾರದ ಮೇರೆಗೆ ನೇಮಕಾತಿ ನೀಡುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್:100:ಎಸ್‌ಸಿಎ:1995, ದಿನಾಂಕ:12.09.1996 ಮತ್ತು ಸಂಖ್ಯೆ:ಡಿಪಿಎಆರ್:11: ಎಸ್‌ಸಿಎ:1997, ದಿನಾಂಕ:31.03.1999, ಸಂಖ್ಯೆ:ಸಿಆಸುಇ:55:ಸೇಅನೇ:2012, ದಿನಾಂಕ:11.07.2012, ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಿ5[4]ನೇಮಕ:ಸುತ್ತೋಲೆ-05/2014-15 ಹಾಗೂ ಕಾಲಕಾಲಕ್ಕೆ ಹೊರಡಿಸಿರುವ ಸರ್ಕಾರದ ಆದೇಶಗಳ ಪ್ರಕಾರ ದಾಖಲೆಗಳನ್ನು ಪರಿಶೀಲಿಸಿ, ಅಗತ್ಯ ಮಾಹಿತಿಗಳೊಂದಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳು ಮತ್ತು ವಿಭಾಗೀಯ ಸಹನಿರ್ದೇಶಕರುಗಳು ಮತ್ತು ಸಂಬಂಧಿಸಿದ ಅಧಿಕಾರಿಗಳು ಅನುಕಂಪದ ಆಧಾರದ ನೇಮಕದ ಪ್ರಸ್ತಾವನೆಗಳನ್ನು ಆಯುಕ್ತರ ಕಛೇರಿಗೆ ಕಳುಹಿಸುತ್ತಿದ್ದಾರೆ.

2. ಅನುಕಂಪದ ಆಧಾರದ ಮೇರೆಗೆ ಗ್ರೂಪ್ ಡಿ ಹಾಗೂ ವಾಹನ ಚಾಲಕರ ಹುದ್ದೆಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಷರತ್ತುಗಳನ್ನು ವಿಧಿಸಿ ಸೇವಾ ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳಿಗೆ ಸಂಬಂಧಿಸಿದ ಉಪನಿರ್ದೇಶಕರ ಕಛೇರಿ ಹಂತದಲ್ಲಿಯೇ ಕೌನ್ಸಿಲಿಂಗ್ ಮುಖೇನ ಶಾಲಾ/ ಕಛೇರಿಗಳಿಗೆ ಸ್ಥಳ ನಿಯುಕ್ತಿ ಆದೇಶವನ್ನು 15 ದಿನಗಳ ಒಳಗಾಗಿ ನೀಡಿ ಈ ಕಛೇರಿಗೆ ವರದಿ ಮಾಡಲು ಅಧಿಸೂಚನೆ ಹೊರಡಿಸಲಾಗುತ್ತಿತ್ತು. ಆದರೆ, ಕೆಲವು ಜಿಲ್ಲಾ ಉಪನಿರ್ದೇಶಕರ ಕಛೇರಿಗಳಲ್ಲಿ ಸ್ಥಳ ನಿಯುಕ್ತಿ ಆದೇಶ ನೀಡುವಲ್ಲಿ ಅನಗತ್ಯ ವಿಳಂಬಕ್ಕೆ ಅಸ್ಪದ ನೀಡುತ್ತಿರುವ ಅಂಶ ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇನ್ನು ಮುಂದೆ ಅನುಕಂಪದ ಆಧಾರದ ಮೇರೆಗೆ ಗ್ರೂಪ್ ಡಿ ಹಾಗೂ ವಾಹನ ಚಾಲಕರ ಹುದ್ದೆಗಳಿಗೆ ಸಂಬಂಧಿಸಿದಂತೆಯೂ ಸಹಾ ಶಿಕ್ಷಣ ಆಯುಕ್ತರ ಕಛೇರಿಯಲ್ಲಿಯೇ ಕೌನ್ಸಿಲಿಂಗ್ ಮುಖೇನ ಶಾಲಾ/ಕಛೇರಿಗಳಿಗೆ ಸ್ಥಳ ನಿಯುಕ್ತಿಗೊಳಿಸಲು ನಿರ್ಧರಿಸಿದ್ದು, ಗ್ರೂಪ್ ಡಿ ಹಾಗೂ ವಾಹನ ಚಾಲಕರ ಖಾಲಿ ಹುದ್ದೆಗಳ ಮಾಹಿತಿಯನ್ನು ★ ದೃಢೀಕರಿಸಿ ಕಾಲಕಾಲಕ್ಕೆ ಸಲ್ಲಿಸಲು ಸೂಚಿಸಿದೆ.

(signature) 23/9/15

[ಕೆ.ಎಸ್.ಸತ್ಯಮೂರ್ತಿ]

ಆಯುಕ್ತರು

ಇವರಿಗೆ:

01. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲಬರ್ಗಾ ಇವರುಗಳಿಗೆ ಕಳುಹಿಸುತ್ತ, ತಮ್ಮ ವ್ಯಾಪ್ತಿಯ ಅಧೀನ ಕಛೇರಿಗಳಿಗೆ ಕಳುಹಿಸುವಂತೆ ಸೂಚಿಸಿದೆ.
02. ಜಿಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಮೈಸೂರು ವಿಭಾಗ.
03. ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ, ಬೆಂಗಳೂರು ಮತ್ತು ಮೈಸೂರು ವಿಭಾಗ. ಇವರುಗಳಿಗೆ ಕಳುಹಿಸುತ್ತ, ತಮ್ಮ ವ್ಯಾಪ್ತಿಯ ಎಲ್ಲ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರುಗಳಿಗೆ ಹಾಗೂ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರುಗಳಿಗೆ/ಹಿರಿಯ ಶಿಕ್ಷಕರುಗಳಿಗೆ ಕಳುಹಿಸಲು ತಿಳಿಸಿದೆ.
04. ಸಿ.ಟಿ.ಇ ಮತ್ತು ಡಯಟ್ ಸಂಸ್ಥೆಗಳ ಮುಖ್ಯಸ್ಥರು, ಸಾ.ಶಿ.ಇಲಾಖೆ, ಬೆಂಗಳೂರು / ಮೈಸೂರು ವಿಭಾಗ.
05. ಕ.ಪ್ರೌ.ಶಿ.ಪ.ಮಂಡಳಿ, ಮೈನಾರಿಟಿ, ವೃತ್ತಿ ಶಿಕ್ಷಣ, ಲೋಕ ಶಿಕ್ಷಣ, ಡಿ.ಎಸ್.ಇ.ಆರ್.ಟಿ., ಬೆಂಗಳೂರು.
06. ಈ ಕಛೇರಿಯ ಸಂಬಂಧಿಸಿದ ಶಾಖಾಧಿಕಾರಿಗಳಿಗೆ.
07. ಕಛೇರಿ ಪ್ರತಿ.

★ ಎಕ್ಸೆಲ್ ಷೀಟ್‌ನಲ್ಲಿ "ನುಡಿ ಅಕ್ಷರ" ಫಾಂಟ್‌ನಲ್ಲಿ ಸಾಫ್ಟ್ ಪ್ರತಿಯೊಂದಿಗೆ ಸಲ್ಲಿಸುವುದು